- ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯಡಿ ಮೀನುಮರಿ ಉತ್ಪಾದನಾ ಕೇಂದ್ರಗಳ ಅಭಿವೃದ್ಧಿ.
- ಮೀನು ಮಾರುಕಟ್ಟೆ ನಿರ್ಮಾಣಕ್ಕೆ ಸಹಾಯಧನ.
- ಮೀನು ಮಾರಾಟಕ್ಕೆ ಸೈಕಲ್ ಮತ್ತು ಐಸ್‌ಬಾಕ್ಸ್, ಮೊಪೆಡ್ ಮತ್ತು ಐಸ್‌ಬಾಕ್ಸ್, ತ್ರಿಚಕ್ರ ವಾಹನ ಮತ್ತು ನಾಲ್ಕು ಚಕ್ರ ವಾಹನ ಖರೀದಿಲು ಸಹಾಯಧನ.

ಆ) ಪ್ರಸ್ತುತ ಒಳನಾಡು ಮೀನುಗಾರಿಕೆಯಲ್ಲಿ ತೊಡಗಿಸಿಕೊಂಡ ಮೀನುಗಾರರ ಸಂಖ್ಯೆ 1.16 ಲಕ್ಷ ಒಳನಾಡು ಮೀನುಗಾರಿಕೆಯಲ್ಲಿ 362 ಮೀನುಗಾರರ ಸಹಕಾರ ಸಂಘಗಳು ಕಾರ್ಯನಿರತವಾಗಿವೆ.

ಇ) ಬೆಂಗಳೂರು ನಗರದಲ್ಲಿ 148 ಮತ್ತು ಗ್ರಾಮಾಂತರ ಜಿಲ್ಲೆಯಲ್ಲಿ 50 ಇಲಾಖಾ ಕೆರೆಗಳಲ್ಲಿ ಮೀನುಗಾರಿಕೆಗೆ ಅವಕಾಶ ಮಾಡಿಕೊಡಲಾಗಿದೆ.

ಈ) ಒಳನಾಡು ಮೀನುಗಾರಿಕೆಯಲ್ಲಿ ತೊಡಗಿರುವ ವೃತ್ತಿನಿರತ ನಿರ್ವಸಿತ ಮೀನುಗಾರರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಲು ಮತ್ಸ್ಯಾಶ್ರಯ ಯೋಜನೆಯಡಿ ರೂ. 40,000–00 ವೆಚ್ಚದಲ್ಲಿ ಮನೆ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ವಿವಿಧ ಯೋಜನೆಗಳಡಿ ನೀಡುತ್ತಿರುವ ಇತರೆ ಸೌಲಭ್ಯಗಳನ್ನು ಮೇಲೆ ಕ್ರಮ ಸಂಖ್ಯೆ:ಅ ರಲ್ಲಿ ನಮೂದಿಸಲಾಗಿದೆ.

ಸಿ.ಇ.ಟಿ ಪ್ರವೇಶ ಶುಲ್ಕದ ವಿವರ

753 (917) ಶ್ರೀ ಹ್ಯಾರೀಸ್ ಎನ್.ಎ. (ಶಾಂತಿನಗರ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಿ.ಇ.ಟಿ. ಪ್ರವೇಶ ಶುಲ್ಕವನ್ನು ಹೆಚ್ಚಿಸುವ ಕುರಿತು ಸರಕಾರದ ನಿರ್ಧಾರಗಳೇನು;

ಆ) ಪ್ರವೇಶಾರ್ಹತೆಯನ್ನು ಪಡೆಯುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸರಕಾರದ ನೆರವಿನ ನಿಯಮಗಳೇನು;

ಇ) ಸರಕಾರ ಮತ್ತು ಕಾಮೆಡ್–ಕೆ ನಡುವಿನ ಸೀಟು ಹಂಚಿಕೆ ಹಾಗೂ ಕಾಮೆಡ್–ಕೆ ಸೀಟುಗಳ ಶುಲ್ಕ ನಿಗದಿ ಕುರಿತಾದ ವಿವರಗಳೇನು;

ಈ) ಬಡ ಪ್ರತಿಭಾವಂತ ವಿದ್ಯಾರ್ಥಿಗಳು ವೃತ್ತಿ ಶಿಕ್ಷಣವನ್ನು ಪಡೆಯಲು ಸರಕಾರದ ಹೆಚ್ಚಿನ ಪ್ರೋತ್ಸಾಹದ ಕ್ರಮಗಳೇನು?

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :

ಅ) : 2010–11ನೇ ಸಾಲಿಗೆ ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕೋರ್ಸಿಗೆ ಸಂಬಂಧಿಸಿದಂತೆ ಸರ್ಕಾರ ಮತ್ತು ಖಾಸಗಿ ಇಂಜಿನಿಯರಿಂಗ್ ಕಾಲೇಜಿನ ಆಡಳಿತ ಮಂಡಳಿಗಳ ಪ್ರತಿನಿಧಿಗಳ ನಡುವೆ ಶುಲ್ಕ ನಿಗದಿ ಬಗ್ಗೆ ಆಗಿರುವ ಒಪ್ಪಂದದಂತೆ ಸರ್ಕಾರದ ಪಾಲಿನ ಸೀಟುಗಳಿಗೆ ವಿದ್ಯಾರ್ಥಿಗಳು ಈ ಕೆಳಕಂಡ ಶುಲ್ಕವನ್ನು ಪಾವತಿಸಬೇಕಾಗುತ್ತದೆ.

1) ಇಂಜಿನಿಯರಿಂಗ್ ರ್ಯಾಂಕ್ ಅನ್ನು 20000 ವರೆಗೆ ಪಡೆಯುವ ಹಾಗೂ ವಾರ್ಷಿಕ ಆದಾಯ ರೂ.2.00 ಲಕ್ಷ ಕಡಿಮೆ ಹೊಂದಿರುವ ವಿದ್ಯಾರ್ಥಿಗಳಿಗೆ – ರೂ.15,000+ ಇತರೆ ಶುಲ್ಕ –
2) 20000 ನಂತರದಲ್ಲಿ ರ್ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ – ರೂ.30,000–00 + ಇತರೆ ಶುಲ್ಕ

ಮೆಡಿಕಲ್, ಡೆಂಟಲ್ ಹಾಗೂ ಭಾರತೀಯ ವೈದ್ಯಪದ್ಧತಿ ಹಾಗೂ ಹೋಮಿಯೋಪತಿ ಕೋರ್ಸುಗಳ ಶುಲ್ಕಕ್ಕೆ ಸಂಬಂಧಿಸಿದಂತೆ ವಿಷಯವು ಪರಿಶೀಲನೆಯಲ್ಲಿದ್ದು ಸದ್ಯದಲ್ಲೇ ಈ ಬಗ್ಗೆ ನಿರ್ಧಾರ ತೆಗೆದು ಕೊಳ್ಳಲಾಗುವುದು.

ಆ) : ಇಂಜಿನಿಯರಿಂಗ್ ಕೋರ್ಸಿಗೆ ಸಂಬಂಧಿಸಿದಂತೆ ಸರ್ಕಾರದ ಪಾಲಿನ ಸೀಟುಗಳ ಪೈಕಿ 20000 ದ ವರೆಗೆ ರ್ಯಾಂಕ್ ಪಡೆಯುವ ಹಾಗೂ ವಾರ್ಷಿಕ ಆದಾಯ ರೂ. 2.00 ಲಕ್ಷಕ್ಕೂ ಕಡಿಮೆ ಹೊಂದಿರುವ ವಿದ್ಯಾರ್ಥಿಗಳಿಗೆ ವಾರ್ಷಿಕ ರೂ.15,000/– ಶುಲ್ಕಕ್ಕೆ (ಹಾಗೂ ಇತರೆ ಶುಲ್ಕಗಳು) ಸೀಟು ಹಂಚಿಕೆ ಮಾಡಲಾಗುವುದು. ಹಾಗೂ ವಿದ್ಯಾರ್ಥಿಗಳು ಪಡೆಯುವ ಶೈಕ್ಷಣಿಕ ಸಾಲದ ಮೇಲೆ ವಿದ್ಯಾರ್ಥಿಯು ಶೇಕಡ 6 ರಷ್ಟು ಬಡ್ಡಿಯನ್ನು ಮಾತ್ರ ಪಾವತಿ ಮಾಡಬೇಕಾಗಿದ್ದು, ಉಳಿದ ಬಡ್ಡಿಯನ್ನು ಸರ್ಕಾರ ಭರಿಸುತ್ತದೆ.

ಇ) : 2010–11ನೇ ಸಾಲಿಗೆ ಸರ್ಕಾರ ಮತ್ತು ಕಾಮೆಡ್–ಕೆ ಪ್ರತಿನಿಧಿಗಳ ಮಧ್ಯೆ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿ ವಿವರ ಈ ಕೆಳಕಂಡಂತಿದೆ.

ಇಂಜಿನಿಯರಿಂಗ್ / ಆರ್ಕಿಟೆಕ್ಚರ್ ಕೋರ್ಸುಗಳಿಗೆ

ಸೀಟು ಹಂಚಿಕೆ	ಶುಲ್ಕ ನಿಗದಿ
1) ಸರ್ಕಾರ ಹಾಗೂ ಕಾಮೆಡ್–ಕೆ 50:50 (ಅಲ್ಪಸಂಖ್ಯಾತವಲ್ಲದ ಕಾಲೇಜುಗಳಲ್ಲಿ) 2) ಅಲ್ಪಸಂಖ್ಯಾತ ಕಾಲೇಜುಗಳಲ್ಲಿ 45:55	1) 20000 ವರೆಗೆ ಇಂಜಿನಿಯರಿಂಗ್ ರ್ಯಾಂಕ್ ಪಡೆದಿರುವ ಹಾಗೂ ವಾರ್ಷಿಕ ಆದಾಯ ರೂ.2.00 ಲಕ್ಷ ಒಳಗೆ ಇರುವ ಅಭ್ಯರ್ಥಿಗಳಿಗೆ ರೂ.15,000+ ಇತರೆ ಶುಲ್ಕ 2) ಉಳಿದ ಅಭ್ಯರ್ಥಿಗಳಿಗೆ ರೂ.30,000–00 + ಇತರೆ ಶುಲ್ಕ 3) ಆಡಳಿತ ಮಂಡಳಿ ಪಾಲಿನ ಸೀಟುಗಳ ಪೈಕಿ ಶೇಕಡ 25 ರಷ್ಟು ಸೀಟುಗಳಿಗೆ ರೂ.1,25,000–00 4) ಉಳಿದ ಶೇಕಡ 25 ರಷ್ಟು (15+10) ಸೀಟುಗಳು NRI & NRI sponsored candidates or other candidates

ಮೆಡಿಕಲ್ ಮತ್ತು ಡೆಂಟಲ್ ಕೋರ್ಸುಗಳ ಶುಲ್ಕಕ್ಕೆ ಸಂಬಂಧಿಸಿದಂತೆ ವಿಷಯವು ಪರಿಶೀಲನೆಯಲ್ಲಿದ್ದು ಸದ್ಯದಲ್ಲೇ ಈ ಬಗ್ಗೆ ಅಂತಿಮ ನಿರ್ಧಾರ ತೆಗೆದುಕೊಳ್ಳಲಾಗುವುದು.

ಈ) ಬಡ ಪ್ರತಿಭಾವಂತ ವಿದ್ಯಾರ್ಥಿಗಳು ವೃತ್ತಿಶಿಕ್ಷಣ ಪಡೆಯಲು ಬ್ಯಾಂಕುಗಳಿಂದ ಪಡೆಯುವ ಶೈಕ್ಷಣಿಕ ಸಾಲಗಳ ಮೇಲೆ ಅಭ್ಯರ್ಥಿಯು ಶೇಕಡ 6 ರಷ್ಟು ಬಡ್ಡಿಯನ್ನು ಸರ್ಕಾರವು ಭರಿಸುತ್ತದೆ.

ಪ್ರೌಢ ಶಾಲೆ ಮತ್ತು ಕಾಲೇಜು ಸಮಸ್ಯೆ

754 (1091) ಶ್ರೀ ಜಯಚಂದ್ರ ಟಿ.ಬಿ (ಶಿರಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿಯ ಶ್ರೀ ಉಗ್ರೇಗೌಡರ ಧರ್ಮಾರ್ಥ ಸರ್ಕಾರಿ ಪದವಿ ಪೂರ್ವ ಕಾಲೇಜು ಮತ್ತು ಪ್ರೌಢ ಶಾಲೆ ವಿಭಾಗಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿ ಮರಗಳ ಕೆಳಗೆ ತರಗತಿಗಳು ನಡೆಯುತ್ತಿದ್ದು ಈ ಸಾಲಿನಲ್ಲೇ ಹೆಚ್ಚುವರಿ ಕೊಠಡಿಗಳನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ?

ಆ) ಗ್ರಾಮಾಂತರ ಪ್ರದೇಶದ ರೈತ ಮಕ್ಕಳ ಉನ್ನತ ಶಿಕ್ಷಣಕ್ಕೆ ಅನುಕೂಲವಾಗಲು ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ವಿಜ್ಞಾನ ವಿಭಾಗ ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ;

ಇ) ಈ ಹೈಸ್ಕೂಲ್ ವಿಭಾಗದಲ್ಲಿ 20 ವರ್ಷಗಳಿಂದಲೂ ಅನಗತ್ಯವಾಗಿರುವ ತೋಟಗಾರಿಕೆ ಶಿಕ್ಷಕರ ಹುದ್ದೆಯನ್ನು ರದ್ದುಗೊಳಿಸಿ ಅಗತ್ಯವಾದ ಚಿತ್ರಕಲಾ ಶಿಕ್ಷಕರ ಹುದ್ದೆಯನ್ನು ಮಂಜೂರು ಮಾಡಲು ಕ್ರಮ ಕೈಗೊಳ್ಳುವರೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) ಶಿರಾ ತಾಲ್ಲೂಕು ಚಿಕ್ಕನಹಳ್ಳಿ ಶ್ರೀ ಉಗ್ರೇಗೌಡ ಸ್ಮಾರಕ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಒಟ್ಟು 10 ಕೊಠಡಿಗಳು ಲಭ್ಯವಿರುತ್ತದೆ. ಅದರಲ್ಲಿ 4 ಕೊಠಡಿಗಳನ್ನು ಪ್ರೌಢಶಾಲೆಗೆ ಬಳಸಿಕೊಳ್ಳುತ್ತಿದ್ದು, 1 ಕೊಠಡಿಯನ್ನು ಗಣಕಯಂತ್ರದ ಕೊಠಡಿಯನ್ನಾಗಿ ಬಳಸಲಾಗುತ್ತಿದೆ. 5 ಕೊಠಡಿಗಳನ್ನು ಪದವಿ ಪೂರ್ವ ಕಾಲೇಜಿಗೆ ಬಳಸಿಕೊಳ್ಳಲಾಗುತ್ತಿದೆ.